

ಚಿತ್ರ: ಕೃಷ್ಣಕುಮಾರ್ ಪಿ.ಎಸ್.



ವರದರಾಜು

'ಸ್ಕೈಪ್‌ನಲ್ಲಿ ಕಲಿಸುವುದರ ಜೊತೆಗೆ ಥಿಯರಿ ಸೇರಿದಂತೆ ಎಲ್ಲವನ್ನೂ ರೆಕಾರ್ಡ್ ಮಾಡಿ ಕಳಿಸುತ್ತೇನೆ. ಈಗಾಗಲೇ ನೃತ್ಯದಲ್ಲಿ ಸಾಕಷ್ಟು ಅನುಭವ ಇರುವ ಹಾಗೂ ನೃತ್ಯದ ಪರಿಕಲ್ಪನೆ ಬಗ್ಗೆ ಸ್ವತಂತ್ರವಾಗಿ ಆಲೋಚಿಸುವ ಸಾಮರ್ಥ್ಯ ಇರುವ ಸುಮಾರು 20 ಶಿಷ್ಯಂದಿರು ಈಗ ನನ್ನ ಬಳಿ ಕೂಚಿಪುಡಿ ನೃತ್ಯ ಕಲಿಯುತ್ತಿದ್ದಾರೆ' ಎಂದು ವಿವರ ನೀಡುತ್ತಾರೆ ಈ ಕಲಾವಿದೆ.

## ರಾಮನವಮಿ ಸಂಗೀತೋತ್ಸವ

ಬೆಂಗಳೂರಿನ ಕೋಟೆ ರಾಮಸೇವಾ ಮಂಡಳಿಯ ಚಪ್ಪರ ಸುಮಾರು ಒಂದೂವರೆ ತಿಂಗಳುಗಳ ಕಾಲ ಸಂಗೀತೋತ್ಸವ ನಡೆಸುತ್ತವೆ. ದೇಶದ ಗಣ್ಯ ಕಲಾವಿದರು ಪಾಲ್ಗೊಳ್ಳುವ ಈ ಸಂಗೀತ ಸಮಾರಾಧನೆಯನ್ನು ಕಳೆದ 82 ವರ್ಷಗಳಿಂದ ಏರ್ಪಡಿಸುತ್ತಾ ಬಂದಿದೆ. ಈ ಸಲ ಕೊರೊನಾ ಕಾರಣದಿಂದಾಗಿ ಕಛೇರಿಗಳಿಗೆ ಬ್ರೇಕ್ ಬಿತ್ತು. ಹಾಗೆಂದು ಪರಂಪರೆಯನ್ನು ಕೈಬಿಡಲಾದೀತೆ? ರಾಮನವಮಿಯ ದಿನ (ಏಪ್ರಿಲ್ 2ರಂದು) ಮೈಸೂರು ಮಂಜುನಾಥ್–ಸುಮಂತ್ ಮಂಜುನಾಥ್ ಪಿಟೀಲು ಆನ್‌ಲೈನ್ ಕಛೇರಿ ನಡೆಸಿಕೊಡುವ ಮೂಲಕ ರಾಮನವಮಿ ಸಂಗೀತೋತ್ಸವ ಪರಂಪರೆಗೆ ಆಧುನಿಕ ಸ್ಪರ್ಶ ನೀಡಿದರು. ಏಪ್ರಿಲ್ 11ರಂದು ಚೆನ್ನೈಯಿಂದ ಶಶಾಂಕ್ ಸುಬ್ರಹ್ಮಣ್ಯ ಕೊಳಲು ಕಛೇರಿಯನ್ನು ಆನ್‌ಲೈನ್‌ನಲ್ಲಿ ನಡೆಸಿಕೊಟ್ಟರು.

'ರಾಮನವಮಿ ಸಂಗೀತ ಕೇಳಲು ಸಾವಿರಾರು ಮಂದಿ ಹಾತೊರೆಯುತ್ತಾರೆ. ಈ ಬಾರಿ ಎಲ್ಲವೂ ನಿಗದಿಯಾಗಿದ್ದು, ನಡೆಸಿಕೊಡಲು ನಿರ್ಬಂಧ ಇದ್ದ ಕಾರಣ ಆನ್‌ಲೈನ್‌ನಲ್ಲಿ ಎರಡು ಕಛೇರಿ ಏರ್ಪಡಿಸಿದ್ದೆವು. ಫೇಸ್‌ಬುಕ್ ಮೂಲಕ ಲೈವ್ ಪ್ರಸಾರ ಮಾಡಿದ್ದು, ಇದರಿಂದ ಮಂಡಳಿಯೊಂದಿಗೆ ಅನೇಕ ವರ್ಷಗಳಿಂದ ಭಾವನಾತ್ಮಕ ಸಂಬಂಧ ಇಟ್ಟುಕೊಂಡವರಿಗೆ ಕೊಂಚ ಸಮಾಧಾನ ಸಿಕ್ಕಿದಂತಾಗಿದೆ' ಎನ್ನುತ್ತಾರೆ ರಾಮಸೇವಾ ಮಂಡಳಿಯ ಅಧ್ಯಕ್ಷ ವರದರಾಜು.

'ನಿಗದಿಯಾಗಿದ್ದ ಕಛೇರಿಗಳನ್ನು ಸದ್ಯಕ್ಕೆ ಮುಂದಕ್ಕೆ ಹಾಕಲಾಗಿದ್ದು, ಎಲ್ಲವೂ ಸರಿಯಾದ ಬಳಿಕ ಮತ್ತೆ ಇದೇ ಚಪ್ಪರದಡಿಯಲ್ಲಿ ಸಂಗೀತ ಕಛೇರಿಗಳು ಎಂದಿನಂತೆ ನಡೆಸುವ ತೀರ್ಮಾನ ಮಾಡಿದ್ದೇವೆ' ಎನ್ನುತ್ತಾರೆ ವರದರಾಜು.

## ಕಲಿಕೆಗೆ ಹೊಸ ಸಾಧ್ಯತೆ

ನಿರ್ಬಂಧದ ಕಾರಣದಿಂದಾಗಿ ಆನ್‌ಲೈನ್ ಮೂಲಕ ನಡೆಯುತ್ತಿರುವ ಸಂಗೀತ–ನೃತ್ಯ ಕಚೇರಿಗಳು ಬಿಕ್ಕಟ್ಟಿನ ನಂತರವೂ ದೊಡ್ಡ ಸಂಖ್ಯೆಯಲ್ಲಿ ಮುಂದುವರೆದರೆ ಆಶ್ಚರ್ಯವಿಲ್ಲ. ತರಗತಿ ನಡೆಯುವ ಸ್ಥಳಕ್ಕೆ ಹೋಗಿಬರುವ ಸಮಯ ಉಳಿಯುವುದರಿಂದ ಅನೇಕರಿಗೆ ಆನ್‌ಲೈನ್ ತರಗತಿಗಳೇ ಉತ್ತಮ ಎನ್ನಿಸುವ ಸಾಧ್ಯತೆ ಇಲ್ಲದಿಲ್ಲ.

ಪ್ರತಿಕ್ರಿಯಿಸಿ: feedback@sudha.co.in